**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಧಾರವಾಡ**

**ಎಸ್.ಸಿ. ಸಂಖ್ಯೆ 173/2019**

ಫ್ರಾಸಾ -08

ಚಾಸಾ-09

| | | |
|---|---|---|
| ಸಾಕ್ಷಿಯ ಹೆಸರು | : | ಈರಯ್ಯಾ ಕಡ್ಲಿ |
| ತಂದೆ ಹೆಸರು | : | ಚನ್ನಬಸಯ್ಯಾ |
| ವಯಸ್ಸು | : | 31 ವರ್ಷ |
| ಉದ್ಯೋಗ | : | ಹಾಲಿನ ವ್ಯಾಪಾರ |
| ವಾಸಸ್ಥಳ | : | ಸಂಪಿಗೆ ನಗರ, ಧಾರವಾಡ |
| ಸತ್ಯ ಪ್ರತಿಜ್ಞೆ ಮೇರೆಗೆ, ದಿನಾಂಕ | : | 18-02-2026. |

**ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರಿಂದಃ**

ನನಗೆ ಮಂಜುನಾಥ ವಾಲೀಕಾರ (ಚಾಸಾ-8) ಗೊತ್ತು. ದಿಃ 31-7-2019 ರಂದು ನಾನು ಮತ್ತು ಮಂಜುನಾಥ ವಾಲೀಕಾರ ರವರು ಸಬ್ ಅರ್ಬನ ಪೋಲಿಸಠಾಣೆಗೆ ಪೋಲೀಸರು ಕರೆದಿದ್ದರಿಂದ ಹೋಗಿದ್ದೆವು. ಅಲ್ಲಿ ಪೋಲೀಸ ಸ್ಟೇಶನನಲ್ಲಿ ನ್ಯಾಯಾಲಯದಲ್ಲಿ ಮಧ್ಯದಲ್ಲಿ ಕುಳಿತಿರುವ ಆರೋಪಿ ಮತ್ತು ಆರೋಪಿ ರಾಜು ಪೂಜಾರ ಪೋಲಿಸಠಾಣೆಯಲ್ಲಿದ್ದರು. ( ಸಾಕ್ಷಿ ಗುರುತಿಸಿದ ಮಧ್ಯದಲ್ಲಿರುವ ಆರೋಪಿ ಹೆಸರು ನ್ಯಾಯಾಲಯದವರು ಕೇಳಿದಾಗ ಆರೋಪಿ ತನ್ನ ಹೆಸರು ನವೀನ ಸುರೇಶ ಉಗರಗೋಳ ಎಂದು ಹೇಳಿರುತ್ತಾರೆ ಅವನು ಈ ಕೇಸಿನ 2 ನೇ ಆರೋಪಿಯಾಗಿರುತ್ತಾನೆ. ಅದೇರೀತಿ ಸಾಕ್ಷಿ ಗುರುತಿಸಿ ಹೆಸರು ಹೇಳಿದ ಇನ್ನೊಬ್ಬ ಆರೋಪಿ ರಾಜೇಶ ಪೂಜಾರ ಈ ಕೇಸಿನ 3 ನೇ ಆರೋಪಿಯಾಗಿರುತ್ತಾನೆ.)

2. ಆರೋಪಿ ನವೀನ ಉಗರಗೋಳ ತಾನು ಕೊಲೆ ಮಾಡಿದ ಜಾಗ ತೋರಿಸುತ್ತೇನೆ ಎಂದು ಹೇಳಿ ಪೋಲೀಸ ವ್ಯಾನನಲ್ಲಿ ನಾನು, ಪೋಲೀಸ ಸಿಬ್ಬಂದಿ ಮತ್ತು ಮಂಜುನಾಥ ವಾಲೀಕಾರ ಮತ್ತು ಆರೋಪಿ ನವೀನ ಉಗರಗೋಳ ಇವರು ಸಬ್‌ಅರ್ಬನ ಪೋಲಿಸಠಾಣೆಯಿಂದ ಹೊರಟು

ಕೆ ಯು ಡಿ ಯೂನಿವರ್ಸಿಟಿ ಬಳಿ ಆರೋಪಿ ಕರೆದುಕೊಂಡು ಹೋದ ಜಾಗಕ್ಕೆ ಹೋದೆವು. ರೈಲ್ವೆ ಸ್ಟೇಶನನ ರೈಲ್ವೆ ಗೇಟಗಿಂತ 30 ಅಡಿ ದೂರದಲ್ಲಿ ಇರುವ ಲೇಡಿಸ್ ಹಾಸ್ಟೇಲ ಪಕ್ಕದಲ್ಲಿ ಅವನು ಕರೆದುಕೊಂಡು ಹೋದ. ನಂತರ ಆ ಜಾಗ ತೋರಿಸಿ ಅಲ್ಲಿ ಆ ಮೃತ ವ್ಯಕ್ತಿಗೆ ಸೆರೆ ಕುಡಿಸಿ ಕಣ್ಣಿಗೆ ಖಾರದಪುಡಿ ಹಾಕಿ ಒಂದು ಬಿದಿರಿನ ಬಡಿಗೆ ತೆಗೆದು ಆರೋಪಿ ಮಲ್ಲಿಕಾರ್ಜುನ ಮತ್ತು ರಾಜೇಶ ಪೂಜಾರಿ ಹೊಡೆದು ಸಾಯಿಸಿದರು ಎಂದು ಹೇಳಿದ. ಆ ಜಾಗದಲ್ಲಿ ಎರಡು ವಾಟರ್ ಬಾಟಲು, 3 ಲೋಟ , ಒಂದು ಖಾರದಪುಡಿ ಪಾಕೇಟ , ಒಂದು ಕುರಕುರೆ ಪಾಕೇಟು, ಹೆಂಡದ 3 ಪಾಕೇಟು ಇತ್ತು. ಮೊದಲು ಮೃತ ನಾಗರಾಜ ಹರಪನಹಳ್ಳಿಗೆ ಸೆರೆ ಕುಡಿಸಿ ಆಮೇಲೆ ಕಣ್ಣಿಗೆ ಖಾರದಪುಡಿ ಹಾಕಿ ಬಿದಿರಿನ ಬಡಿಗೆಯಿಂದ ಹೊಡೆದು ಸಾಯಿಸಿದ್ದಾರೆ ಎಂದು ನವೀನ ಉಗರಗೋಳ ಹೇಳಿದ. ಅವನು ಮೃತನಾಗುವ ಪೂರ್ವದಲ್ಲಿ ನನಗೆ ಅವನ ಪರಿಚಯ ಇರಲಿಲ್ಲ ಆದರೆ ಈ ಕೇಸು ಆದ ಮೇಲೆ ಅವನ ಬಗ್ಗೆ ಗೊತ್ತಾಯಿತು. ಪೋಲೀಸರು ಮೇಲೆ ಹೇಳಿದ ಅಲ್ಲಿದ್ದ ವಸ್ತುಗಳನ್ನು ವಶಪಡಿಸಿಕೊಂಡರು. ಅಲ್ಲಿ ಒಂದು ಬೋರವೆಲ್ ಬಾಕ್ಸ ಇತ್ತು ಮತ್ತು ಹಾಳು ನೀರಿನ ಟ್ಯಾಂಕ ಇತ್ತು. ಅಲ್ಲಿ ಫೋಟೊ ತೆಗೆದರು ಮತ್ತು ಬರವಣಿಗೆ ಮಾಡಿದರು ಮತ್ತು ಅದಕ್ಕೆ ನಾನು ಸಹಿ ಮಾಡಿದ್ದೇನೆ ಮತ್ತು ಮಂಜುನಾಥ ವಾಲೀಕಾರ ಕೂಡ ಸಹಿ ಮಾಡಿದ್ದಾರೆ. ಸಾಕ್ಷಿ ಗುರುತಿಸಿದ ಪಂಚನಾಮೆಯನ್ನು ನಿಶಾನೆ ಪಿಃ 25 ಎಂದು ಗುರುತಿಸಲಾಗಿದೆ ಅದರಲ್ಲಿರುವ ಸಾಕ್ಷಿ ಗುರುತಿಸಿದ ಸಾಕ್ಷಿ ಸಹಿಯನ್ನು ನಿಶಾನೆ ಪಿಃ 25 (ಎ) ಎಂದು ಮತ್ತು ಸಾಕ್ಷಿ ಗುರುತಿಸಿದ ಮಂಜುನಾಥ ವಾಲೀಕಾರ ರವರ ಸಹಿಯನ್ನು ನಿಶಾನೆ ಪಿಃ 25 (ಬಿ) ಎಂದು ಕ್ರಮವಾಗಿ ಗುರುತಿಸಲಾಗಿದೆ. ಈಗ ನನಗೆ ತೋರಿಸಿದ ಫೋಟೊ ಅಲ್ಲೇ ತೆಗೆದ ಫೋಟೊ ಅದರಲ್ಲಿ ನಾನು ಮತ್ತು ಚಾಸಾ-8 ಮಂಜುನಾಥ ವಾಲೀಕಾರ ಮತ್ತು ಆರೋಪಿ ನವೀನ ಉಗರಗೋಳ ಕೂಡ ಇದ್ದಾರೆ ಎಂದು ಗುರುತಿಸಿರುತ್ತಾರೆ. ಸಾಕ್ಷಿ ಗುರುತಿಸಿದ ಫೋಟೊ ನಿಶಾನೆ ಪಿಃ 26 ಎಂದು ಅದರಲ್ಲಿರುವ ಸಾಕ್ಷಿ ಗುರುತಿಸಿದ ಸಾಕ್ಷಿಯ ಭಾವಚಿತ್ರ ನಿಶಾನೆ ಪಿಃ 26 (ಎ) ಎಂದು ಸಾಕ್ಷಿ ಗುರುತಿಸಿದ ಮಂಜುನಾಥ ವಾಲೀಕಾರ ಭಾವಚಿತ್ರ ನಿಶಾನೆ ಪಿಃ 26 (ಬಿ) ಎಂದು , ಸಾಕ್ಷಿ ಗುರುತಿಸಿದ 2 ನೇ ಆರೋಪಿ ನವೀನ ರವರ ಭಾವಚಿತ್ರ ನಿಶಾನೆ ಪಿಃ 26 (ಸಿ) ಎಂದು ಕ್ರಮವಾಗಿ

ಗುರುತಿಸಲಾಗಿದೆ. ಠಾಣೆಯಿಂದ ಮಧ್ಯಾಹ್ನ 12.30 ರ ಸುಮಾರಿಗೆ ಬಿಟ್ಟಿದ್ದೆವು, ಇವೆಲ್ಲ ಪಂಚನಾಮೆ ಮುಗಿಯುವಷ್ಟರಲ್ಲಿ ಮಧ್ಯಾಹ್ನ ಸುಮಾರು 1.45 ಘಂಟೆ ಆಗಿತ್ತು. ಅಲ್ಲಿ ವಶಪಡಿಸಿಕೊಂಡ ವಸ್ತುಗಳನ್ನು ನೋಡಿದರೆ ಗುರುತಿಸಬಲ್ಲೆ ಎಂದು ಹೇಳಿ ಸಾಕ್ಷಿ ಗುರುತಿಸಿದ ಕುರಕುರೆ ಖಾಲಿ ಪಾಕೇಟ ಮುಮಾ-12 ಎಂದು, ಎರಡು ವಾಟರ್ ಬಾಟಲ್ ಗಳು ಮುಮಾ-13 ಎಂದು, 3 ಪ್ಲಾಸ್ಟಿಕ ಲೋಟಗಳು ಒಟ್ಟು ಸೇರಿಸಿ ಮುಮಾ-14 ಎಂದು, 3 ಖಾಲಿ ಮದ್ಯದ ಟೆಟ್ರಾ ಪಾಕೇಟಗಳು ಮುಮಾ-15 ಎಂದು, ಮೆಣಸಿನ ಪುಡಿ ಖಾಲಿ ಪಾಕೇಟ ಮುಮಾ-16 ಎಂದು ಕ್ರಮವಾಗಿ ಗುರುತಿಸಲಾಗಿದೆ. (ಇವುಗಳನ್ನು ಸೀಲು ಒಡೆದು ತೋರಿಸಲಾಗಿದೆ)

3. ಆನಂತರ ಮತ್ತೆ ನಾವು ಪೋಲೀಸ ಠಾಣೆಗೆ ಹೋದೆವು. ಆಗ ಆರೋಪಿ ರಾಜೇಶ ಪೂಜಾರಿ ತಾನು ಮೃತನನ್ನು ಹೊಡೆಯಲು ಉಪಯೋಗಿಸಿದ ಬಡಿಗೆ ಕಂಟಿಯಲ್ಲಿ ಮುಚ್ಚಿಟ್ಟಿದ್ದೇನೆ ಅದು ಇಟ್ಟ ಜಾಗವನ್ನು ತೋರಿಸುತ್ತೇನೆ ಎಂದು ನನ್ನನ್ನು, ಪೋಲೀಸ ಸಿಬ್ಬಂದಿ ಮತ್ತು ಮಂಜುನಾಥ ವಾಲೀಕಾರ ರವರನ್ನು ಎಂದು ಅವನು ಕರೆದುಕೊಂಡು ಹೋದ ಕೆ ಯು ಡಿ ಯೂನಿವರ್ಸಿಟಿ ಬಳಿ ಕರೆದುಕೊಂಡು ಹೋಗಿ ಅವರು ಹೊಡೆದು ಕೊಂದಿದ್ದೇನೆ ಎಂದು ಹೇಳುವ ಮೊದಲು ನವೀನ ಕರೆದುಕೊಂಡು ಹೋದ ಮೇಲೆ ಹೇಳಿದ ಜಾಗದ ಬಳಿಗೇ ಕರೆದುಕೊಂಡು ಹೋಗಿ ಅಲ್ಲಿ ಕಂಟಿಯಲ್ಲಿ ಮುಚ್ಚಿಟ್ಟಿದ್ದ ದಪ್ಪಿನ ಬಿದಿರಿನ ಬಡಿಗೆ ತೋರಿಸಿದ. ಪೋಲೀಸರು ಅದನ್ನು ವಶಪಡಿಸಿಕೊಂಡರು. ಅಲ್ಲಿ ಫೋಟೊ ಕೂಡ ತೆಗೆದರು ಎಂದು ಸಾಕ್ಷಿ ಆ ಫೋಟೊ ನೋಡಿ ಗುರುತಿಸಿರುತ್ತಾರೆ. ಆ ಫೋಟೊ ನಿಶಾನೆ ಪಿಃ 27 ಎಂದು ಗುರುತಿಸಲಾಗಿದೆ. ಅದರಲ್ಲಿರುವ ಸಾಕ್ಷಿ ಗುರುತಿಸಿದ ಸಾಕ್ಷಿಯ ಫೋಟೊವನ್ನು ನಿಶಾನೆ ಪಿಃ 27(ಎ) ಎಂದು ಗುರುತಿಸಲಾಗಿದೆ. ಅದೇರೀತಿ ಸಾಕ್ಷಿ ಗುರುತಿಸಿದ ಮಂಜುನಾಥ ವಾಲೀಕಾರ ರವರ ಫೋಟೊವನ್ನು ನಿಶಾನೆ ಪಿಃ 27(ಬಿ) ಎಂದು ಗುರುತಿಸಲಾಗಿದೆ ಮತ್ತು ಸಾಕ್ಷಿ ಗುರುತಿಸಿದ ಆರೋಪಿ ರಾಜೇಶ ಪೂಜಾರ ರವರ ಫೋಟೊವನ್ನು ನಿಶಾನೆ ಪಿಃ 27 (ಸಿ ) ಎಂದು ಗುರುತಿಸಲಾಗಿದೆ. ಆ ಸಮಯದಲ್ಲಿ ಪೋಲೀಸರು ಬರವಣಿಗೆ ಬರೆದುಕೊಂಡು ಎಂದು ಸಾಕ್ಷಿ ಆ

ಪಂಚನಾಮೆ ನೋಡಿ ಗುರುತಿಸಿರುತ್ತಾರೆ. ಆ ಪಂಚನಾಮೆಯನ್ನು ನಿಶಾನೆ ಪಿಃ 28 ಎಂದು ಗುರುತಿಸಲಾಗಿದೆ. ಅದರಲ್ಲಿ ಸಾಕ್ಷಿ ಗುರುತಿಸಿದ ಸಾಕ್ಷಿಯ ಸಹಿಯನ್ನು ನಿಶಾನೆ ಪಿಃ 28 (ಎ) ಎಂದು ಗುರುತಿಸಲಾಗಿದೆ. ಅದೇರಿತಿ ಸಾಕ್ಷಿ ಗುರುತಿಸಿದ ಮಂಜುನಾಥ ವಾಲೀಕಾರ ರವರ ಸಹಿಯನ್ನು ನಿಶಾನೆ ಪಿಃ 28 (ಬಿ) ಎಂದು ಗುರುತಿಸಲಾಗಿದೆ. ಆ ದಿನ ನಮ್ಮಗಳ ಸಮಕ್ಷಮ ವಶಪಡಿಸಿಕೊಂಡ ಬಡಿಗೆ ನೋಡಿದರೆ ಗುರುತಿಸಬಲ್ಲೆ ಎಂದು ಆ ಬಡಿಗೆಯನ್ನು ಸೀಲು ಒಡೆದು ತೋರಿಸಿದಾಗ ಗುರುತಿಸಿರುತ್ತಾರೆ. ಅದನ್ನು ಮುಮಾ-17 ಎಂದು ಗುರುತಿಸಲಾಗಿದೆ. ಇವೆಲ್ಲ ಪ್ರಕ್ರೀಯೆಗಳು ಸಂಜೆ 4 ಘಂಟೆಯಿಂದ ರಿಂದ 5 ಘಂಟೆ ನಡುವೆ ನಡೆಯಿತು.

**ಮುಂದಿನ ಮುಖ್ಯ ವಿಚಾರಣೆ ಮಧ್ಯಾಹ್ನಕ್ಕೆ ಮುಂದೂಡಲಾಯಿತು.**

(ಈ ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಉಕ್ತ ಹೇಳಿಕೆಯ ಮೇರೆಗೆ ಗಣಕೀಕೃತ ಮಾಡಿಸಲಾಯಿತು).

ಓ. ಹೇ. ಕೇ. ಸರಿ ಇದೆ.

(ಬಿ. ಎಸ್. ಭಾರತಿ )
ಪ್ರಧಾನ ಜಿಲ್ಲಾ ಹಾಗೂ ಸತ್ರ ನ್ಯಾಯಾಧೀಶರು,
ಧಾರವಾಡ.

**ಸಾಕ್ಷಿಯನ್ನು ಮಧ್ಯಾಹ್ನ ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಮುಂದುವರೆದಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರಿಂದಃ**

4. ಮತ್ತೆ ನಾವೆಲ್ಲರೂ ಸಬರ್ಅರ್ಬನ್ ಪೋಲಿಸಠಾಣೆಗೆ ವಾಪಸು ಹೋದೆವು. ಆಗ ಆರೋಪಿ ರಾಜೇಶ ಪೂಜಾರಿಯವರು ಕೊಲೆ ಮಾಡುವಾಗ ತಾನು ಧರಿಸಿದ್ದ ಬಟ್ಟೆ ನಮ್ಮ ಮನೆಯಲ್ಲಿದೆ ನನ್ನನ್ನು ಕರೆದುಕೊಂಡು ಹೋದರೆ ತೋರಿಸುತ್ತೇನೆ ಎಂದು ಹೇಳಿದನು. ಅದೇರೀತಿ ಆರೋಪಿ ನವೀನ ಕೂಡ ಹೇಳಿದನು.

5. ಮೊದಲು ರಾಜೇಶ ಪೂಜಾರಿ ಸ್ಲಮ್ ಎರಿಯಾದಲ್ಲಿದ್ದ ತನ್ನ ಮನೆ ತೋರಿಸಿದ ನಾವು

ಅಲ್ಲಿಗೆ ಹೋದೆವು. ಅದು ಜರ್ಮನ ಆಸ್ಪತ್ರೆಯಿಂದ ಮುಂದೆ ಹೋದರೆ ಇರುವ ಸ್ಲಮ್ ನಲ್ಲಿ ಇದೆ. ರಾಜೇಶ ಪೂಜಾರಿ ತನ್ನ ಮನೆಯ ಹಾಲ್ ನ ಮೂಲೆಯಲ್ಲಿಟ್ಟಿದ್ದ ತಾನು ಘಟನೆಯ ವೇಳೆ ಧರಿಸಿದ್ದ ಬಟ್ಟೆಯನ್ನು ತೋರಿಸಿದ. 4 ಕಲರ್ ಮಿಕ್ಸ ಇರುವ ಟೀಶರ್ಟ ಇತ್ತು ಮತ್ತು ಬೂದಿ ಕಲರ್ ಜೀನ್ಸ ಪ್ಯಾಂಟ ಇತ್ತು. ಅವೆರಡು ಒದ್ದೆಯಾಗಿತ್ತು. ಪೋಲೀಸರು ಬಂದು ಪಂಚನಾಮೆ ಮಾಡಿ ಅದನ್ನು ತೆಗೆದುಕೊಂಡರು. ಆ ಪಂಚನಾಮೆಗೆ ನಾನು ಮತ್ತು ಮಂಜುನಾಥ ಬಸಪ್ಪ ವಾಲೀಕಾರ ಸಹಿ ಮಾಡಿದ್ದೇವೆ ಎಂದು ಸಾಕ್ಷಿ ಆ ಪಂಚನಾಮೆ ನೋಡಿ ಗುರುತಿಸಿರುತ್ತಾರೆ. ಆ ಪಂಚನಾಮೆಯನ್ನು ನಿಶಾನೆ ಪಿಃ 29 ಎಂದು ಗುರುತಿಸಲಾಗಿದೆ ಮತ್ತು ಅದರಲ್ಲಿರುವ ಸಾಕ್ಷಿ ಗುರುತಿಸಿದ ಸಾಕ್ಷಿ ಸಹಿಯನ್ನು ನಿಶಾನೆ ಪಿಃ 29(ಎ) ಎಂದು, ಅದೇರೀತಿ ಸಾಕ್ಷಿ ಗುರುತಿಸಿದ ಮಂಜುನಾಥ ಬಸಪ್ಪ ವಾಲೀಕಾರ ರವರ ಸಹಿಯನ್ನು ನಿಶಾನೆ ಪಿಃ 29 (ಬಿ) ಎಂದು ಗುರುತಿಸಲಾಗಿದೆ. ಆ ಸ್ಲಮ್ ನೆಹರುನಗರದಲ್ಲಿ ಇದೆ. ಆ ಪಂಚನಾಮೆ ಮಾಡುವಾಗ ಫೋಟೊ ತೆಗೆದಿದ್ದಾರೆ ಎಂದು ಸಾಕ್ಷಿ ಆ ಫೋಟೊ ನೋಡಿ ಗುರುತಿಸಿರುತ್ತಾರೆ. ಸಾಕ್ಷಿ ಅ ಫೋಟೊ ನೋಡಿ ಗುರುತಿಸಿರುತ್ತಾರೆ ಅದನ್ನು ನಿಶಾನೆ ಪಿಃ 30 ಎಂದು ಗುರುತಿಸಲಾಗಿದೆ. ಅದರಲ್ಲಿರುವ ಸಾಕ್ಷಿ ಗುರುತಿಸಿದ ಸಾಕ್ಷಿಯ ಫೋಟೊ ನಿಶಾನೆ ಪಿಃ30(ಎ) ಎಂದು, ಅದೇರೀತಿ ಸಾಕ್ಷಿ ಗುರುತಿಸಿದ ಮಂಜುನಾಥ ವಾಲೀಕಾರ ರವರ ಫೋಟೊ ನಿಶಾನೆ ಪಿಃ 30(ಬಿ) ಎಂದು, ಆರೋಪಿ ರಾಜೇಶ ಪೂಜಾರ ರವರ ಫೋಟೊ ನಿಶಾನೆ ಪಿಃ 30(ಸಿ) ಎಂದು ಕ್ರಮವಾಗಿ ಗುರುತಿಸಲಾಗಿದೆ. ಈ ರೀತಿ ಬಟ್ಟೆ ತೆಗೆದುಕೊಂಡು ಪಂಚನಾಮೆ ಮಾಡಿದ ಎಲ್ಲ ಪ್ರಕ್ರೀಯೆಗಳು ಆ ದಿನ ಸಂಜೆ ಸುಮಾರು 6 ರಿಂದ 7 ಘಂಟೆ ವರೆಗೆ ನಡೆಯಿತು. ಆ ದಿನ ವಶಪಡಿಸಿಕೊಂಡ ಬಟ್ಟೆಗಳನ್ನು ನೋಡಿದರೆ ಗುರುತಿಸಬಲ್ಲೆ ಎಂದು ಸಾಕ್ಷಿ ಆ ಬಟ್ಟೆಗಳನ್ನು ನೋಡಿ ಗುರುತಿಸಿರುತ್ತಾರೆ. ಆ ಬಟ್ಟೆಗಳನ್ನು ಸೀಲು ಒಡೆದು ಸಾಕ್ಷಿಗೆ ತೋರಿಸಲಾಗಿದೆ. ಸಾಕ್ಷಿ ಗುರುತಿಸಿದ ಟೀಶರ್ಟ ಮುಮಾ-18 ಎಂದು ಅದೇರೀತಿ ಸಾಕ್ಷಿ ಗುರುತಿಸಿದ ಜೀನ್ಸ ಪ್ಯಾಂಟ ಮುಮಾ-19 ಎಂದು ಗುರುತಿಸಲಾಗಿದೆ.

6. ಅದಾದ ನಂತರ ಅಲ್ಲಿಂದ ಹೊರಟು ಇನ್ನೊಬ್ಬ ಆರೋಪಿ ನವೀನ ಉಗರಗೋಳ ತನ್ನ

ಮನೆ ಈ ಮನೆಯಿಂದ 2 ಕ್ರಾಸ ನಂತರ ಇದೆ ಎಂದು ಹೇಳಿ ಅದೇ ಸ್ಲಮ್ ನಲ್ಲಿ ಇರುವ ಇನ್ನೊಂದು ಮನೆಗೆ ಆರೋಪಿ ನವೀನ ಉಗರಗೋಳ ಕರೆದುಕೊಂಡು ಹೋದರು. ಅಲ್ಲಿ ರೂಮನಲ್ಲಿ ಇದ್ದ ಒಂದು ಫುಲ್ ತೋಳ ಜೀನ್ಸ ಶರ್ಟ , ಬ್ರೌನ ಕಲರ ಜೀನ್ಸ ಪ್ಯಾಂಟ ಎರಡು ತೋರಿಸಿ ಅದು ಘಟನೆಯ ಸಂದರ್ಭದಲ್ಲಿ ತಾನು ಧರಿಸಿದ್ದ ಬಟ್ಟೆ ಎಂದು ಹಾಜರುಪಡಿಸಿದ. ಅವುಗಳು ಒದ್ದೆಯಾಗಿತ್ತು. ಪೋಲೀಸರು ಅವುಗಳನ್ನು ಪಂಚನಾಮೆ ಮಾಡಿ ವಶಪಡಿಸಿಕೊಂಡರು. ಆ ಪಂಚನಾಮೆಗೆ ನಾನು ಸಹಿ ಮಾಡಿದ್ದೇನೆ ಮತ್ತು ಮಂಜುನಾಥ ವಾಲೀಕಾರ ಕೂಡ ಸಹಿ ಮಾಡಿದ್ದಾರೆ ಎಂದು ಸಾಕ್ಷಿ ತನ್ನ ಸಹಿ ಮತ್ತು ಮಂಜುನಾಥ ವಾಲೀಕಾರ ರವರ ಸಹಿಗಳನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿ ಗುರುತಿಸಿದ ಆ ಪಂಚನಾಮೆಯನ್ನು ನಿಶಾನೆ ಪಿಃ 31 ಎಂದು ಅದರಲ್ಲಿರುವ ಸಾಕ್ಷಿ ಗುರುತಿಸಿದ ಸಾಕ್ಷಿಯ ಸಹಿಯನ್ನು ನಿಶಾನೆ ಪಿಃ 31 (ಎ) ಎಂದು ಅದೇರೀತಿ ಸಾಕ್ಷಿ ಗುರುತಿಸಿದ ಮಂಜುನಾಥ ವಾಲೀಕಾರ ರವರ ಸಹಿಯನ್ನು ನಿಶಾನೆ ಪಿಃ 31 (ಬಿ) ಎಂದು ಗುರುತಿಸಲಾಗಿದೆ. ಆ ಸಮಯದಲ್ಲಿ ಫೋಟೊ ತೆಗೆದಿದ್ದಾರೆ ಎಂದು ಹೇಳಿ ಸಾಕ್ಷಿ ತಾನು , ಮಂಜುನಾಥ ಮತ್ತು 2 ನೇ ಆರೋಪಿ ಮತ್ತು ಪೋಲೀಸರು ಇರುವ ಫೋಟೊ ನೋಡಿ ಗುರುತಿಸಿರುತ್ತಾರೆ ಆ ಫೋಟೊವನ್ನು ನಿಶಾನೆ ಪಿಃ 32 ಎಂದು ಗುರುತಿಸಲಾಗಿದೆ. ಅದರಲ್ಲಿರುವ ಸಾಕ್ಷಿ ಗುರುತಿಸಿದ ಸಾಕ್ಷಿಯ ಭಾವಚಿತ್ರವನ್ನು ನಿಶಾನೆ ಪಿಃ 32(ಎ) ಎಂದು ಅದೇರೀತಿ ಸಾಕ್ಷಿ ಗುರುತಿಸಿದ ಮಂಜುನಾಥ ವಾಲೀಕಾರ ರವರ ಭಾವಚಿತ್ರವನ್ನು ನಿಶಾನೆ ಪಿಃ 32 (ಬಿ) ಎಂದು ಅದೇರೀತಿ ಸಾಕ್ಷಿ ಗುರುತಿಸಿದ ಆರೋಪಿ ನವೀನ ಉಗರಗೋಳ ರವರ ಭಾವಚಿತ್ರವನ್ನು ನಿಶಾನೆ ಪಿಃ 32 (ಸಿ) ಎಂದು ಕ್ರಮವಾಗಿ ಗುರುತಿಸಲಾಗಿದೆ. ಇವೆಲ್ಲ ಆಗುವಷ್ಟರಲ್ಲಿ ಸುಮಾರು ರಾತ್ರಿ 8.15 ಘಂಟೆ ಆಗಿತ್ತು. ಆ ದಿನ ವಶಪಡಿಸಿಕೊಂಡ ಬಟ್ಟೆಗಳನ್ನು ನೋಡಿದರೆ ಗುರುತಿಸಬಲ್ಲೆ ಎಂದು ಸಾಕ್ಷಿ ಜೀನ್ಸ ಶರ್ಟ ಮತ್ತು ಬ್ರೌನ ಕಲರ ಪ್ಯಾಂಟ ಸೀಲು ಒಡೆದು ತೋರಿಸಿದಾಗ ಗುರುತಿಸಿರುತ್ತಾರೆ. ಜೀನ್ಸ ಶರ್ಟನ್ನು ಮುಮಾ-20 ಎಂದು ಅದೇರೀತಿ ಪ್ಯಾಂಟನ್ನು ಮುಮಾ-21 ಎಂದು ಕ್ರಮವಾಗಿ ಗುರುತಿಸಲಾಗಿದೆ. ಎಲ್ಲ ವಶಪಡಿಸಿಕೊಂಡ ವಸ್ತುಗಳ ಮೇಲೆ ನಾನು ಮತ್ತು ಮಂಜುನಾಥ ವಾಲೀಕಾರ ಸಹಿ ಮಾಡಿದ ಚೀಟಿಗಳನ್ನು ಅಂಟಿಸಿರುತ್ತಾರೆ ಎಂದು ಸಾಕ್ಷಿ ಅವುಗಳನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀಸವಾಲು 3 ನೇ ಆರೋಪಿತರ ಪರ ಶ್ರೀ ಪಿ ಎಚ್ ಎಚ್ ವಕೀಲರಿಂದಃ**

7. ಮಂಜುನಾಥ ವಾಲೀಕಾರ ಚಾಸಾ-8 ನಾವು ಚಿಕ್ಕ ಹುಡುಗರಾಗಿದ್ದಾಗಿನಿಂದ ಪರಿಚಯ. ನಾನು ಖಾಯಂ ಪೋಲಿಸಠಾಣೆಗೆ ಹೋಗುವುದಿಲ್ಲ. ಇದೇ ಮೊದಲ ಬಾರಿಗೆ ಈ ಕೇಸನಲ್ಲೇ ಪೋಲಿಸಠಾಣೆಗೆ ಹೋಗಿದ್ದೇನೆ. ಪೋಲೀಸರು ದಿಃ 31-7-2019 ರಂದು ಪೋಲಿಸಠಾಣೆಗೆ ಬರಲು ಬರವಣಿಗೆಯಲ್ಲಿ ನೋಟೀಸ ಕೊಟ್ಟಿದ್ದರು. ಯಾವ ಪೋಲೀಸರು ಕೊಟ್ಟಿದ್ದರು ನನಗೆ ಗೊತ್ತಿಲ್ಲ. ಕೆಲಗೇರಿಗೆ ಬಂದು ಕೊಟ್ಟಿದ್ದರು. ಆದರೆ ಹಿಂದಿನ ದಿನ ಸುಮಾರು ಬೆಳಿಗ್ಗೆ 11 ವರೆ 12 ಘಂಟೆ ಸುಮಾರಿಗೆ ಆ ರೀತಿ ಬಂದು ನೋಟೀಸ ಕೊಟ್ಟಿದ್ದರು. ನಾನು ಕೆಲಗೇರಿಗೆ ಹಾಲು ತುಂಬಿಸಲು ಹೋಗುತ್ತೇನೆ. ಸಂಪಿಗೆ ನಗರ ಮತ್ತು ಕೆಲಗೇರಿ ಅಕ್ಕಪಕ್ಕದಲ್ಲೇ ಇವೆ. ನನ್ನ ಗೆಳೆಯ ಮಂಜುನಾಥ ವಾಲೀಕಾರ ಕೆಲಗೇರಿಯ ಆಂಜನೇಯ ನಗರದವರು. ಪಂಚನಾಮೆ ಹೇಗೆ ಬರೆಯಬೇಕು ಎಂದು ನನಗೆ ಗೊತ್ತಿಲ್ಲ. ಪಂಚನಾಮೆಗೆ ಬಾ ಎಂದು ನನ್ನನ್ನು ಕರೆದಾಗ ನನ್ನ ಬಳಿಯಿಂದ ಪೋಲೀಸರು ನನ್ನ ಒಪ್ಪಿಗೆ ಪತ್ರ ಪಡೆದಿಲ್ಲ. ಹಿಂದಿನ ದಿನ ಅವರು ಈ ರೀತಿ ತೋರಿಸುತ್ತಾರೆ ಬನ್ನಿ ಎಂದು ಹೇಳಿರಲಿಲ್ಲ ಬರೀ ಪೋಲಿಸಠಾಣೆಗೆ ಬರಲು ಮಾತ್ರ ಹೇಳಿದ್ದರು. ಯಾತಕ್ಕೆ ಪೋಲೀಸರು ಬರಲು ಹೇಳಿದ್ದಾರೆ ಎಂದು ಅವರನ್ನು ವಿಚಾರಿಸಿಲ್ಲ. ನಾನು ಪೋಲೀಸರನ್ನು ವಿಚಾರಿಸುವಷ್ಟು ದೊಡ್ಡವನಲ್ಲ ಅದರಿಂದ ವಿಚಾರಿಸಿಲ್ಲ.

8. ರಾಕೇಶ ಹರಪನಹಳ್ಳಿ ನನಗೆ ಗೊತ್ತು ಆದರೆ ಈ ಕೇಸು ಆದ ಮೇಲೆ ನನಗೆ ಗೊತ್ತು. ನಾನು ಬೆಳಿಗ್ಗೆ ಬಂದಾಗಿನಿಂದ ರಾಕೇಶ ಹರಪನಹಳ್ಳಿಯವರ ಜೊತೆಗೆ ಕೋರ್ಟನ ಹೊರಗಡೆ ನಿಂತಿದ್ದೇನೆ ಅಂದರೆ ಸರಿ. ನಾನು ಅವರ ಜೊತೆ ಕೋರ್ಟಗೆ ಬರಲಿಲ್ಲ ಅವರು ಮೊದಲು ಬಂದರು ನಂತರ ನಾನು ಬಂದೆ. ಸಾಕ್ಷಿ ಹೇಳಲು ಒಳಗೆ ಬರುವ ಮುಂಚೆ ಅವರ ಜೊತೆಯೇ ಮಾತನಾಡುತ್ತಾ ನ್ಯಾಯಾಲಯದ ಹೊರಗೆ ಇದ್ದೆ ಅಂದರೆ ಸರಿ. ಇನ್ನೊಬ್ಬರು ನಮ್ಮ ಜೊತೆ ಹೊರಗಡೆ ಇದ್ದವರು

ಉಮೇಶ ಎನ್ನುವ ನನ್ನ ಗೆಳೆಯ. ನಾನು ಹೊರಗೆ ಇದ್ದಾಗ ಆರೋಪಿಗಳನ್ನು ರಾಕೇಶ ಹರಪನಹಳ್ಳಿ (ಚಾಸಾ-1) ತೋರಿಸಿ ಇವರುಗಳು ಇಂತಹವರು ಎಂದು ನನಗೆ ಹೇಳಿದರು ಅಂದರೆ ಸರಿಯಲ್ಲ. ಅದೇರೀತಿ ಕೋರ್ಟನಲ್ಲಿ ಇದೇರೀತಿ ಸಾಕ್ಷಿ ಹೇಳಿ ಎಂದು ಕೂಡ ರಾಕೇಶ ಹರಪನಹಳ್ಳಿ ಹೇಳಿದರು ಅಂದರೆ ಸರಿಯಲ್ಲ.

9. ನಾನು ಪೋಲಿಸಠಾಣೆಗೆ ಆ ದಿನ ಹೋದಾಗ ಆರೋಪಿ ರಾಜೇಶ ಮತ್ತು ನವೀನ ಮತ್ತು ಪೋಲೀಸನವರು ಇದ್ದರು. ಪೋಲೀಸನವರು ಯಾವ ಸಿಬ್ಬಂದಿಗಳು ಇದ್ದರು ಎಂದು ಅವರ ಹೆಸರುಗಳು ನನಗೆ ಗೊತ್ತಿಲ್ಲ. ನಾನು ಬೆಳಿಗ್ಗೆ 10 ಘಂಟೆ ಸುಮಾರಿಗೆ ಆದಿನ ಪೋಲೀಸಠಾಣೆಗೆ ಹೋಗಿದ್ದೆ. ನಾನು 7 ನೇ ತರಗತಿ ಪಾಸಾಗಿದ್ದೇನೆ. ಮೊದಲ ಬಾರಿಗೆ ಘಟನಾ ಸ್ಥಳಕ್ಕೆ ಹೋಗುವ ಸಮಯದಲ್ಲಿ ಆರೋಪಿ ರಾಜೇಶ ಮತ್ತು ಪೋಲೀಸ ಸಿಬ್ಬಂದಿ, ನಾನು ಮಂಜು ವಾಲೀಕಾರ ರವರು ಇದ್ದೆವು. ಪೋಲೀಸರು ಎಷ್ಟು ಜನ ಇದ್ದರು ಮತ್ತು ಅವರ ಹೆಸರುಗಳು ನನಗೆ ಹೇಳಲು ಬರುವುದಿಲ್ಲ. ಎಷ್ಟು ಜನ ಪೋಲೀಸರು ಇದ್ದರು ಎಂದು ನನಗೆ ಅಂದಾಜು ಹೇಳಲು ಗೊತ್ತಿಲ್ಲ. ನಾವು ಯಾವ ಪೋಲೀಸರನ್ನು ಮೊದಲು ಭೇಟಿಯಾದೆ ಎಂದು ನನಗೆ ಹೇಳಲು ಆಗುವುದಿಲ್ಲ. ಪೋಲೀಸ ಜೀಪನಲ್ಲಿ ಹೋಗಿದ್ದೆವು. ನಾನು ಯೂನಿವರ್ಸಿಟಿ ಎರಿಯಾದಲ್ಲಿ ಮೊದಲಿನಿಂದ ಅಡ್ಡಾಡಿಲ್ಲ. ರೈಲ್ವೆ ಗೇಟನಿಂದ ಆ ಸ್ಥಳ 30 ರಿಂದ 35 ಅಡಿ ದೂರದಲ್ಲಿದೆ. ಅಲ್ಲಿ ಎಡಗಡೆ ಹನುಮಂತ ದೇವರ ಗುಡಿ ಇದೆ ಎಂದರೆ ನನಗೆ ಗೊತ್ತಿಲ್ಲ , ಅಲ್ಲಿ ನಾನು ಬಹಳ ಓಡಾಡಿಲ್ಲ. ಅಲ್ಲಿ ಎದುರುಗಡೆ ಸೈನ್ಸ ಎಕ್ಜಿಬಿಷನ್ ಸೆಂಟರ ಇದೆ ಎಂದರೆ ನನಗೆ ಗೊತ್ತಿಲ್ಲ. ಅಲ್ಲಿಂದ ದಾಟಿ ಬಂದ ಮೇಲೆ ಮೂರು ರೋಡು ಕೂಡುತ್ತದೆ ಅಂದರೆ ಸರಿ. ರೈಲ್ವೆ ಗೇಟನಿಂದ ಮೂರು ರಸ್ತೆ ಕೂಡುವ ಜಾಗಕ್ಕೆ ಬರಬೇಕಾದರೆ 100 ರಿಂದ 150 ಅಡಿ ದೂರ ಆಗುತ್ತದೆ ಎಂದರೆ ನನಗೆ ಗೊತ್ತಿಲ್ಲ. ಆ ಕ್ರಾಸನಿಂದ ಎಡಗಡೆ ಭಾಗದಲ್ಲಿ ಲೇಡೀಜ್ ಹಾಸ್ಟೇಲಗೆ ಹೋಗುವ ದಾರಿ ಇದೆ. ಆ ಕ್ರಾಸನಿಂದ 200 ಮೀಟರ ದೂರದಲ್ಲಿ ಲೇಡಿಜ್ ಹಾಸ್ಟೇಲ ಇದೆ ಎಂದರೆ ನನಗೆ ಗೊತ್ತಿಲ್ಲ ಆದರೆ ಅದರ ನಂತರ ಕಂಪೌಂಡ ಇದೆ ನಂತರ ಹಾಸ್ಟೇಲ ಇದೆ ಅಷ್ಟು ಮಾತ್ರ

ಗೊತ್ತು. ಅಲ್ಲಿ ಎರಡು ಲೇಡೀಜ್ ಹಾಸ್ಟೇಲ್ ಇದೆ ಎಂದರೆ ನನಗೆ ಗೊತ್ತಿಲ್ಲ. ಅಲ್ಲಿ ಇರುವ ನಾನು ಹೋಗಿದ್ದೆ ಎಂದು ಹೇಳುವ ಸ್ಥಳದಲ್ಲಿರುವ ಲೇಡೀಜ್ ಹಾಸ್ಟೇಲ್ ಹೆಸರು ನನಗೆ ಗೊತ್ತಿಲ್ಲ. ಎರಡೂ ಲೇಡೀಜ್ ಹಾಸ್ಟೇಲ್ ಗಳಿಗೆ ವಾಚಮೆನ್ ಗಳಿದ್ದಾರೆ ಅಂದರೆ ಸರಿ. ಅದೇರೀತಿ ಅಲ್ಲಿ ಗೇಟ ಒಳಗಡೆ ಬರುವಾಗ ಕಮಾನ ಇರುವ ಕಡೆಕೂಡ ಒಬ್ಬ ವಾಚಮನ್ ಇರುತ್ತಾರೆ ಎಂದರೆ ನನಗೆ ಗೊತ್ತಿಲ್ಲ ಇರಬಹುದು. ಯೂನಿವರ್ಸಿಟಿ ಕ್ಯಾಂಪಸ್ ನಲ್ಲಿ ತುಂಬಾ ಜನ ಅಡ್ಡಾಡುತ್ತಿರುತ್ತಾರೆ ಎಂಬ ಪ್ರಶ್ನೆಗೆ ಸಾಕ್ಷಿ ಅಲ್ಲಿ ಕ್ಯಾಂಪಸ ಇಲ್ಲ ಎಂದು ಉತ್ತರಿಸಿರುತ್ತಾರೆ. ಅದು ಜಂಗಲ್ ಇದೆ ಎಂದು ಉತ್ತರಿಸಿರುತ್ತಾರೆ.

10. ದಿಃ 31-7-2019 ರಂದು ಮಳೆಯಾಗಿತ್ತು ಅಂದರೆ ಸರಿ. ಜಾಗ ತುಂಬಾ ಕೆಸರಿತ್ತು ಅಂದರೆ ಸರಿ. ಒಳಗಡೆ ಯೂನಿವರ್ಸಿಟಿ ಕ್ಯಾಂಪಸ ಒಳಗಡೆ ಕಾಡಿನ ರೀತಿ ಗಿಡಗಳು ಇದ್ದ ಜಾಗಕ್ಕೆ ಹೋಗುವಾಗ ಯೂನಿವರ್ಸಿಟಿಯವರ ಸಹಾಯ ತೆಗೆದುಕೊಂಡರೋ ಇಲ್ಲವೋ ನನಗೆ ಗೊತ್ತಿಲ್ಲ. ನೀವು ಬನ್ನಿ ಪಂಚನಾಮೆಗೆ ಎಂದು ಅಲ್ಲಿ ಲೇಡೀಜ ಹಾಸ್ಟೇಲನಲ್ಲಿದ್ದ ವಾಚಮನ ರನ್ನು ಕರೆದರೋ ಇಲ್ಲವೋ ನನಗೆ ಗೊತ್ತಿಲ್ಲ. 4 ದಿವಸದಿಂದ ಆಗ ನಿರಂತರವಾಗಿ ಮಳೆ ಇತ್ತು ಅಂದರೆ ಸರಿ. ಆ ಹಾಸ್ಟೇಲ ಕಡೆಯಿಂದ ಹೋಗುವ ಪೂರಾ ಜಾಗ ಕೆಸರು ಕೆಸರಾಗಿತ್ತು ಅಂದರೆ ಸರಿ. ಕುರಕುರೆ ಪಾಕೇಟ , ಮೆಣಸಿನ ಪುಡಿ ಪಾಕೇಟಗಳು, ಬಾಟಲಗಳು ಕೆಸರಾಗಿತ್ತು ಎಂಬ ಪ್ರಶ್ನೆಗೆ ಸಾಕ್ಷಿ ಅವು ಅಲ್ಲಿ ಕಸದ ಮೇಲೆ ಬಿದ್ದಿದ್ದರಿಂದ ಕೆಸರಾಗಿತ್ತೊ ಇಲ್ಲವೋ ನಾನು ನೋಡಿಲ್ಲ. ಪೋಲಿಸಠಾಣೆಯಿಂದ ಯೂನಿವರ್ಸಿಟಿಗೆ ಹೋಗಲು 10-15 ನಿಮಿಷ ಆಗಬಹುದು. ಲೇಡಿಜ್ ಹಾಸ್ಟೇಲದಿಂದ ಘಟನಾ ಸ್ಥಳ ಎಂದು ಹೇಳುವ ಜಾಗಕ್ಕೆ ಹೋಗಲು 2 ರಿಂದ 3 ನಿಮಿಷ ಆಗಬಹುದು. ನನ್ನ ಸಹಿ ತೆಗೆದುಕೊಂಡು ಆ ಮಹಜರ ಯಾರು ಬರೆದರು ಎಂದು ನನಗೆ ಹೇಳಲಾಗುವುದಿಲ್ಲ. ಆರೋಪಿ ಕರೆದುಕೊಂಡು ಹೋಗಿದ್ದ ಎಂದು ಹೇಳುವ ಆ ಸ್ಥಳದ ಪೂರ್ವ ಪಶ್ಚಿಮ ಎನಿದೆ ಎಂದು ಹೇಳಲಾಗುವುದಿಲ್ಲ. ಆ ಪಂಚನಾಮೆಯಲ್ಲಿ ದಿಕ್ಕುಗಳು ಬರೆದಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ

ನನಗೆ ಅಷ್ಟು ಓದಲು ಬರುವುದಿಲ್ಲ. ಅದನ್ನು ನಾನು ಓದಿಲ್ಲ ವಾಲೀಕಾರ ರವರು ಓದಿದ್ದಾರೆ. ಪಂಚನಾಮೆಯಲ್ಲಿ ಏನೇನು ಬರೆಯಬೇಕು ಎಂದು ನಾನು ಹೇಳಿ ಬರೆಸಿಲ್ಲ.

11. ಅಲ್ಲಿ ಸಿಕ್ಕ ವಸ್ತುಗಳ ಮೇಲೆ ಒಂದೊಂದು ವಸ್ತುಗಳ ಮೇಲೂ ಗುರುತು ಮಾಡಿಕೊಂಡರೋ ಇಲ್ಲವೋ ನನಗೆ ಗೊತ್ತಿಲ್ಲ. ನಾವು ಆ ಸ್ಥಳಕ್ಕೆ ಆ ದಿನ ಹೋದಾಗ ಜಿಟಿ ಜಿಟಿ ಮಳೆ ಇತ್ತು. ಸಣ್ಣ ಮಳೆ ಎಂದರೆ ಬಟ್ಟೆ ಸ್ವಲ್ಪ ತೊಯ್ದಿತ್ತು. ಆ ರೀತಿ ಮಳೆ ಬರುವಾಗ ಬರವಣಿಗೆ ಮಾಡಿದರೆ ಆ ಪೇಪರ್ ನೆನೆಯುತ್ತದೆ ಮತ್ತು ಬರವಣಿಗೆ ಕೂಡ ನೆನೆಯುತ್ತದೆ ಎಂಬ ಪ್ರಶ್ನೆಗೆ ಸಾಕ್ಷಿ ಛತ್ರಿ ಇಟ್ಟುಕೊಂಡು ಬರವಣಿಗೆ ಮಾಡಿದ್ದಾರೆ ಎಂದು ಉತ್ತರಿಸಿರುತ್ತಾರೆ. ನಿಶಾನೆ ಪಿಃ26 ಫೋಟೊದಲ್ಲಿ ಛತ್ರಿ ಇಟ್ಟುಕೊಂಡಿರುವುದು ಕಾಣಿಸುತ್ತಿಲ್ಲ ಎಂದರೆ ಸರಿ. ಆದರೆ ಛತ್ರಿ ಇಟ್ಟುಕೊಂಡಾಗ ಫೋಟೊ ತೆಗೆಯದೇ ಇರಬಹುದು ಎಂದು ಸಾಕ್ಷಿ ಉತ್ತರಿಸಿರುತ್ತಾರೆ.

12. ನಾವು ಅಲ್ಲಿ ಹೋಗಿದ್ದೆವು ಮತ್ತು ಆರೋಪಿತನು ಕೊಲೆ ಮಾಡಿದ ಜಾಗ ಎಂದು ತೋರಿಸಿದ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಅಲ್ಲಿ ಆರೋಪಿತ ಇದೇ ಜಾಗದಲ್ಲೇ ಮೃತನನ್ನು ಬಡಿಗೆಯಿಂದ 1 ಮತ್ತು 3 ನೇ ಆರೋಪಿ ಹೊಡೆದು ಸಾಯಿಸಿದರು ಎಂದು ಆ ಜಾಗ ತೋರಿಸಿದ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಅಲ್ಲಿಗೆ ಹೋದಾಗ ಮುಮಾ–12 ರಿಂದ 16 ಪೋಲೀಸರು ವಶಪಡಿಸಿಕೊಂಡರು ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಮೃತ ನಾಗರಾಜ ಎಷ್ಟು ವಯಸ್ಸಿನವನು ನನಗೆ ಗೊತ್ತಿಲ್ಲ. ಘಟನಾ ಸ್ಥಳದಲ್ಲಿ ಒಂದು ಹಳೆ ನೀರಿನ ಟ್ಯಾಂಕ ಇತ್ತು ಮತ್ತು ಬೋರವೆಲ್ ಬಾಕ್ಸ ಇತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಾನು ಮತ್ತು ಚಾಸಾ–8 ಮಂಜುನಾಥ ವಾಲೀಕಾರ ರವರು ಪೋಲೀಸರು ಅಲ್ಲೇ ಬರೆದ ಪಂಚನಾಮೆಗಳಿಗೆ ಸಹಿ ಮಾಡಿದೆವು ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಪೋಲೀಸರು ನನ್ನ ಎದುರಿಗೆ ಯಾವುದೇ ನಕಾಶೆ ಬಿಡಿಸಿಲ್ಲ. ಅಲ್ಲಿ ಸುಮಾರು ಒಂದರಿಂದ ಒಂದುವರೆ ತಾಸು ಇದ್ದಿರಬಹುದು.

ಅಲ್ಲಿಂದ ವಾಪಸು ಠಾಣೆಗೆ ಹೋಗಲು 10 ರಿಂದ 15 ನಿಮಿಷ ಬೇಕು. ಆ ದಿನ ವಶಪಡಿಸಿಕೊಂಡ ವಸ್ತುಗಳ ಮೇಲೆ ಯಾವುದೇ ಗುರುತು ಮಾಡದೇ ಇರುವುದರಿಂದ ಆ ದಿನ ವಶಪಡಿಸಿಕೊಂಡ ವಸ್ತುಗಳು ಯಾವುದು ಎಂದು ನನಗೆ ನಿಖರವಾಗಿ ಹೇಳಲು ಆಗುವುದಿಲ್ಲ ಅಂದರೆ ಸರಿಯಲ್ಲ. ನಾನು ಹೇಳಿದ ರೀತಿಯ ವಸ್ತುಗಳು ಮಾರ್ಕೇಟನಲ್ಲಿ ಸಿಗುತ್ತದೆ ಅಂದರೆ ಸರಿ. ಆದರೆ ಇವುಗಳನ್ನು ಆ ಸ್ಥಳದಿಂದಲೇ ತೆಗೆದುಕೊಂಡು ಬಂದಿದ್ದಾರೆ. ಇವುಗಳನ್ನು ಆ ಸ್ಥಳದಿಂದಲೇ ತೆಗೆದುಕೊಂಡು ಬಂದಿದದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

13. ಒಂದನೇ ಪಂಚನಾಮೆ ಮುಗಿದನಂತರ ಪೋಲಿಸಠಾಣೆ ಮುಟ್ಟುವ ಹೊತ್ತಿಗೆ ಸುಮಾರು 1.45 ಘಂಟೆ ಆಗಿತ್ತು. ಅದಾದ ಮೇಲೆ 5 ರಿಂದ 10 ನಿಮಿಷ ಪೋಲಿಸಠಾಣೆಯಲ್ಲಿದ್ದು ಮತ್ತೆ ಆರೋಪಿಯನ್ನು ಕರೆದುಕೊಂಡು ಹೊರಟು ಹೋದೆವು. ಘಟನಾ ಸ್ಥಳ ವಾಪಸು 2 ನೇ ಬಾರಿ ಬಂದು ಮುಟ್ಟಿದಾಗ ಮಧ್ಯಾಹ್ನ 2 ರಿಂದ 2.10 ಘಂಟೆ ಆಗಿತ್ತು. ಆ ಸಮಯದಲ್ಲಿ ಪೋಲೀಸರು ಬೇರೆ ಪಂಚರನ್ನು ಕರೆಯಲು ಪ್ರಯತ್ನಪಟ್ಟರೋ ಇಲ್ಲವೋ ನನಗೆಗೊತ್ತಿಲ್ಲ. ನಾವು ಪೋಲೀಸರಿಂದ ಸ್ವಲ್ಪ ದೂರ ಇದ್ದೆವು ಆನಂತರ ಅವರು ಒಳಗೆ ಕರೆದಾಗ ಪೋಲೀಸ ಬೆನ್ನು ಹತ್ತಿ ಹೋದೆವು. 2 ನೇ ಬಾರಿ ಸ್ಥಳಕ್ಕೆ ಹೋದಾಗ ಅಲ್ಲಿ ಸ್ವಲ್ಪ ಕಂಟಿ ಬೆಳೆದಿದ್ದ ಜಾಗವಾಗಿತ್ತು ಮತ್ತು ಅದು ಅದೇ ಸ್ಥಳವಾಗಿತ್ತು ಸ್ವಲ್ಪ ರಾಡಿಯಾಗಿತ್ತು. ಮೊದಲನೆ ಸಲ ನಾವು ಅಲ್ಲಿಗೆ ಹೋದಾಗ ಆ ಜಾಗದಲ್ಲಿ ಏನಾದರೂ ಬಿದ್ದಿತ್ತೊ ಇಲ್ಲವೋ ನಾವು ನೋಡಿಲ್ಲ. ಆ ಬಡಿಗೆಗೆ ಎಲ್ಲಿ ಕೆಸರಾಗಿತ್ತು ಎಂದು ನಾವು ನೋಡಿಲ್ಲ. ಆ ಬಡಿಗೆ 2 ರಿಂದ 3 ಪೂಟ ಒಳಗೆ ಇತ್ತು. ಆ ಬಡಿಗೆ ಕಂಟಿ ಒಳಗಿಂದ ಇಟ್ಟಿದ್ದನ್ನು ತೆಗೆದಿದ್ದಾರೆ. ಆ ಪಂಚನಾಮೆಗೆ 3-4 ಜನ ಅಥವಾ 5 ಜನ ಇರಬಹುದು. ಮೊದಲು ಬಂದ ಪೋಲೀಸ ನವರು ಇದ್ದರೋ ಅಥವಾ ಬೇರೆ ಪೋಲೀಸರು ಇದ್ದರೋ ಅಷ್ಟು ನನಗೆ ಗೊತ್ತಿಲ್ಲ. ಪೋಲೀಸರು ಕರೆದಾಗ ನಾನು ಒಳಗೆ ಹೋಗಿದ್ದೆ ಅದಕ್ಕೂ ಮುಂಚೆ ಅಲ್ಲಿ ಏನೆನಾಯಿತು ನನಗೆ ಗೊತ್ತಿಲ್ಲ. ಅಲ್ಲಿ ಪೋಲೀಸರೇ ಆ ಬಡಿಗೆ ಇಟ್ಟು ನಂತರ ಆರೋಪಿ ಕೈಯಲ್ಲಿ ಕೊಟ್ಟು ಪೋಟೊ ತೆಗೆಸಿದ್ದಾರೆ ಅಂದರೆ ಸರಿಯಲ್ಲ. ಆ

ಪಂಚನಾಮೆಯಲ್ಲಿ ಆ ಕಟ್ಟಿಗೆಗೆ ಯಾವುದಾದರೂ ಕಲೆ ಇತ್ತಾ ಮಣ್ಣು ಇತ್ತಾ ಬರೆದಿದ್ದಾರೊ ಇಲ್ಲವೋ ನನಗೆ ಗೊತ್ತಿಲ್ಲ ಎಕೆಂದರೆ ನನಗೆ ಓದಲು ಬರುವುದಿಲ್ಲ. ಆದರೆ ವಾಲೀಕಾರ ರವರಿಗೆ ಗೊತ್ತಿರಬಹುದು. ಆರೋಪಿ ಯಾವುದೇ ರೀತಿ ಕಟ್ಟಿಗೆ ತೋರಿಸಿಲ್ಲ ಮತ್ತು ಪೋಲೀಸರು ಯಾವುದೇ ಕಟ್ಟಿಗೆ ವಶಪಡಿಸಿಕೊಂಡಿಲ್ಲ ಅಂದರೆ ಸರಿಯಲ್ಲ. ಅದರಲ್ಲಿ ಎನು ಬರೆದಿದ್ದಾರೆ ಎಂದು ನನಗೆ ಮಾಹಿತಿ ಇಲ್ಲ ಅಂದರೆ ಸರಿ. 2 ನೇ ಬಾರಿ ಹೋದ ಸ್ಥಳದಲ್ಲಿ ಸುಮಾರು ಒಂದು ತಾಸು ಅಥವಾ 50 ನಿಮಿಷ ಇದ್ದಿರಬಹುದು. 2 ನೇ ಪಂಚನಾಮೆ ಯಾರು ಬರೆದರು ಎಂದು ನನಗೆ ಹೇಳಲು ಆಗುವುದಿಲ್ಲ. 1 ನೇ ಪಂಚನಾಮೆ ಬರೆದವರೇ ಇದ್ದರೋ ಅಥವಾ ಬೇರೆಯವರು ಇದ್ದರೋ ನಾನು ಗಮನಿಸಿಲ್ಲ.

14. ನಾವು ಹೋಗಿದ್ದ ಘಟನಾ ಸ್ಥಳದಿಂದ ನೆಹರುನಗರ ಎಷ್ಟು ದೂರ ಆಗುತ್ತದೆ ಎಂದು ನನಗೆ ಹೇಳಲು ಬರುವುದಿಲ್ಲ. ಯಾವ ರಸ್ತೆ ಮೂಲಕ ನೆಹರು ನಗರಕ್ಕೆ ಹೋಗಬೇಕು ಎಂದು ನನಗೆ ಹೇಳಲು ಬರುವುದಿಲ್ಲ ಎಕೆಂದರೆ ನಾನು ಯೂನಿವರ್ಸಿಟಿ ಒಳಗೆ ಓಡಾಡುವುದಿಲ್ಲ ಆದರಿಂದ ಆ ಜಾಗದಿಂದ ನೆಹರು ನಗರಕ್ಕೆ ಹೇಗೆ ಹೋಗಬೇಕು ಎಂದು ಗೊತ್ತಿಲ್ಲ. ನೆಹರು ನಗರಕ್ಕೆ ಪೋಲೀಸ ಠಾಣೆಯಿಂದ ನನ್ನನ್ನು ಕರೆದುಕೊಂಡು ಹೋಗಿದ್ದರು. ಪೋಲೀಸ ಜೀಪನಲ್ಲಿ ನಾನು, ಮಂಜುನಾಥ ವಾಲೀಕಾರ , ಪೋಲೀಸ ಸಿಬ್ಬಂದಿ , ಆರೋಪಿಗಳು ನೆಹರುನಗರಕ್ಕೆ ಹೋಗಿದ್ದೆವು. ವಾಪಸು ಬಂದು ಠಾಣೆಯಿಂದ ನೆಹರುನಗರಕ್ಕೆ ಹೋಗುವ ಪೂರ್ವದಲ್ಲಿ ಠಾಣೆಯಲ್ಲಿ ಸಂಜೆ 3 ವರೆಯಿಂದ 4 ಘಂಟೆ ವರೆಗೂ ಇದ್ದೆವು. ಠಾಣೆಯಿಂದನೆಹರು ನಗರಕ್ಕೆಜರ್ಮನ ಹಾಸ್ಪಿಟಲ್ ಹಳಿಯಾಳ ರಸ್ತೆ ಮೂಲಕ ಹೋದೆವು. ಅದು ಯೂನಿವರ್ಸಿಟಿ ಕಡೆಯಿಂದ ಹೋದರೋ, ಶ್ರೀನಗರ ಸರ್ಕಲ ಕಡೆಯಿಂದ ಹೋದೆವು ಅಥವಾ ಬೇರೆ ಕಡೆಯಿಂದ ಹೋದರೋ ನನಗೆ ಗೊತ್ತಿಲ್ಲ. ನೆಹರುನಗರದ ಯಾವ ಕ್ರಾಸ ಎಂದು ನನಗೆ ಹೇಳಲು ಬರುವುದಿಲ್ಲ. ಆರೋಪಿ ಪೂಜಾರ ಅಲ್ಲಿಗೆ ನಮ್ಮನ್ನು ಕರೆದುಕೊಂಡು ಹೋದ. ನೆಹರು ನಗರ ಶ್ರೀನಗರದಿಂದ 1 ಕಿಮೀ ವ್ಯಾಪ್ತಿಯಲ್ಲಿದೆ ಎಂದರೆ ನನಗೆ ಗೊತ್ತಿಲ್ಲ. ಅವನು ಕರೆದುಕೊಂಡು ಹೋದ ಎಂದು ಹೇಳುವ ಮನೆಯ ಸುತ್ತಮುತ್ತ ಯಾರ ಯಾರ ಮನೆಗಳು ಇತ್ತು

ಎಂದು ನನಗೆ ಹೇಳಲಾಗುವುದಿಲ್ಲ. ಆ ಮನೆಯ ಬಾಗಿಲು ಯಾವ ದಿಕ್ಕಿಗೆ ಇತ್ತು ಎಂದು ನನಗೆ ಹೇಳಲಾಗುವುದಿಲ್ಲ. ಆ ಮನೆಯಲ್ಲಿ ಎಷ್ಟು ಕೋಣೆ ಇತ್ತು ನನಗೆ ಗೊತ್ತಿಲ್ಲ ಆದರೆ ಹಾಲ್ ನ ಮೂಲೆಯಲ್ಲಿ ಅವನು ಇಟ್ಟಿದ್ದ. ಒದ್ದೆಯಾದ ಬಟ್ಟೆ ಆ ರೀತಿ ಇಡುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಆ ರೀತಿ ಆರೋಪಿ ಆ ಬಟ್ಟೆ ತೋರಿಸಿದ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಅಲ್ಲಿ ಅಕ್ಕಪಕ್ಕ ಮನೆಯವರನ್ನು ವಿಚಾರಿಸಿ ಅವನದೇ ಮನೆಯೇ ಎಂದು ಕೇಳಿ ಅಕ್ಕಪಕ್ಕದ ಮನೆಯವರ ಸಹಿ ತೆಗೆದುಕೊಂಡಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ. ಯಾವ ದಿಕ್ಕಿನ ಮೂಲೆಯಲ್ಲಿ ಆ ಬಟ್ಟೆಗಳನ್ನು ಇಟ್ಟಿದ್ದ ಎಂದು ನನಗೆ ಹೇಳಲಾಗುವುದಿಲ್ಲ. ಒಳಗೆ ಹೋದಾಗ ಯಾವ ಕಡೆ ಮೂಲೆಯಲ್ಲಿ ಬಟ್ಟೆ ಇತ್ತು ಎಂದು ನನಗೆ ಹೇಳಲಾಗುವುದಿಲ್ಲ. ಅಲ್ಲಿ ಯಾವುದೇ ಬಟ್ಟೆ ವಶಪಡಿಸಿಕೊಂಡಿಲ್ಲ ಮತ್ತು ನಾನು ಆ ಸ್ಥಳಕ್ಕೆ ಹೋಗಿಲ್ಲ ಆದ್ದರಿಂದ ಯಾವ ಕಡೆ ಮೂಲೆಯಲ್ಲಿ ಬಟ್ಟೆ ಇತ್ತು ಎಂದು ನನಗೆ ಹೇಳಲು ಆಗುತ್ತಿಲ್ಲ ಅಂದರೆ ಸರಿಯಲ್ಲ. ಆ ಮನೆಗೆ ನಾನು ಹೋಗಿಲ್ಲ ಆ ಕಾರಣಕ್ಕಾಗಿ ಆ ಮನೆಯಲ್ಲಿ ಎಷ್ಟು ಕೋಣೆ ಇತ್ತು ಎಂದು ನನಗೆ ಹೇಳಲು ಆಗುವುದಿಲ್ಲ ಅಂದರೆ ಸರಿಯಲ್ಲ. ನಾನು ಆ ಮನೆಗೆ ಹೋದಾಗ 45 ನಿಮಿಷದಿಂದ ಒಂದು ತಾಸು ನಾವು ಅಲ್ಲಿ ಇದ್ದಿರಬಹುದು. ಅಲ್ಲಿ ನಮ್ಮ ಸಮಕ್ಷಮ ಪೋಲೀಸರು ಅಕ್ಕಪಕ್ಕದ ಮನೆಯವರು ಹೇಳಿಕೆ ತೆಗೆದುಕೊಳ್ಳಲು ಪ್ರಯತ್ನಿಸಿಲ್ಲ. ನಾವು ಅಲ್ಲಿಗೆ ಹೋದಾಗ ಮನೆ ಬೀಗ ಹಾಕಿತ್ತೋ ಇಲ್ಲವೋ ನನಗೆ ಗೊತ್ತಿಲ್ಲ ನಾನು ಜೀಪನಲ್ಲಿದ್ದೆ ಪೋಲೀಸರು ಕರೆದಾಗ ಒಳಗೆ ಹೋದೆ. ಅವರು ಒಳಗೆ ಹೋಗಿ ಅಲ್ಲಿ ನಿಂತು ನಂತರ ನನ್ನನ್ನು ಕರೆದಾಗ ನಾನು ಹೋದೆ ಅಂದರೆ ಸರಿ. ಆ ಮನೆಯ ಸುತ್ತಮುತ್ತ ಎನಿದೆ ಎಂದು ಪಂಚನಾಮೆಯಲ್ಲಿ ಹೇಳಿ ಬರೆಸಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ. ಅಲ್ಲಿ ಯಾವುದೇ ನಕಾಶೆ ತೆಗೆದಿಲ್ಲ.

15. ಅದಾದ ಮೇಲೆ ಮತ್ತು ಆರೋಪಿ ನವೀನ ಉಗರಗೋಳ ರವರ ಮನೆಗೆ ಅವನು ಕರೆದುಕೊಂಡು ಹೋಗಿದ್ದರಿಂದ ಹೋದೆವು. ನವೀನ ಉಗರಗೋಳನಿಗೆ ಅಪ್ಪ , ಅಮ್ಮ , ಅಣ್ಣ , ತಮ್ಮ ಇದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ. ಅಲ್ಲಿಗೆ ಹೋದಾಗ ಆ ಮನೆಯ ಅಕ್ಕಪಕ್ಕ ಎನಿತ್ತು ಎಂದು ನನಗೆ

ಹೇಳಲಾಗುವುದಿಲ್ಲ, ಅಷ್ಟುಹೊತ್ತಿಗೆ ಸ್ವಲ್ಪ ಕತ್ತಲಾಗಿತ್ತು ಅದರಿಂದ ನನಗೆ ಹೇಳಲಾಗುವುದಿಲ್ಲ. ಊಟ ಆದ ತಕ್ಷಣ 3 ನೇ ಪಂಚನಾಮೆಗೆ ರಾಜೇಶ ರವರ ಮನೆಗೆ ಹೋದೆವು. ರಾಜೇಶ ಪೂಜಾರಿ ರವರ ಮನೆಯಲ್ಲಿ ವಶಪಡಿಸಿಕೊಂಡ ಬಟ್ಟೆಗಳು ಇದೇ ಬಟ್ಟೆ ಎಂದು ಗುರುತಿಸಲು ಯಾವುದಾದರೂ ಗುರುತು ಮಾಡಿದರೋ ಇಲ್ಲವೋ ನನಗೆ ಗೊತ್ತಿಲ್ಲ. ಅದನ್ನು ವಶಪಡಿಸಿಕೊಂಡ ಮೇಲೆ ಅದನ್ನು ಯಾರು ಹಿಡಿದುಕೊಂಡು ಹೋದರು ಹೇಗೆ ತೆಗೆದುಕೊಂಡು ಹೋದರು ನನಗೆ ಗೊತ್ತಿಲ್ಲ.

16. ನವೀನ ಉಗರಗೋಳ ಮನೆ ಎಂತಹದಿತ್ತು ಅದರ ಬಾಗಿಲು ಯಾವ ದಿಕ್ಕಿನಲ್ಲಿತ್ತು ಎಂದು ನನಗೆಹೇಳಲಾಗುವುದಿಲ್ಲ, ಆದರೆ ಅದು ಆರ್ ಸಿ ಸಿ ಮನೆ. ಅ ದು ಎಷ್ಟು ಕೋಣೆ ಇತ್ತು ಎಂದು ನನಗೆ ಹೇಳಲಾಗುವುದಿಲ್ಲ. ಆ ಮನೆಯಲ್ಲಿ ಯಾರಿದ್ದರೋ ಇಲ್ಲವೋ ನನಗೆ ಗೊತ್ತಿಲ್ಲ. ಅಲ್ಲಿ ಪೋಲೀಸರು ಅಕ್ಕಪಕ್ಕದ ಮನೆಯವರನ್ನು ಅದು ಬಾಡಿಗೆ ಮನೆಯಾ ಸ್ವಂತ ಮನೆಯಾ ಎಂದು ವಿಚಾರಿಸಿದರು ಆದರೆ ಅವರನ್ನು ಪಂಚನಾಮೆಗೆ ಸಹಿ ಮಾಡು ಎಂದು ಕೇಳಿದರೋ ಇಲ್ಲವೋ ನನಗೆ ಗೊತ್ತಿಲ್ಲ. ಯಾರು ಯಾರನ್ನು ಎಷ್ಟು ಜನರನ್ನು ವಿಚಾರಿಸಿದರು ನನಗೆ ಹೇಳಲು ಆಗುವುದಿಲ್ಲ ಮತ್ತು ಅವರ ಹೆಸರು ಹೇಳಲು ಆಗುವುದಿಲ್ಲ. ಮನೆಗೆ ಎಂಟರ್ ಆದ ಮೇಲೆ ಮನೆಯಲ್ಲಿ ಏನೇನು ಇದೆ ಎಂದು ಹೇಳಲು ಆಗುವುದಿಲ್ಲ. ಆ ಮನೆ ಎಷ್ಟು ದೊಡ್ಡದಿತ್ತು ಎಂದು ನನಗೆ ಹೇಳಲು ಆಗುವುದಿಲ್ಲ. ಬಾಗಿಲನಿಂದ ಹೊರಗೆ ಹೋದ ಮೇಲೆ ಹಾಲ್ ಇತ್ತು ಅದರಿಂದ ಒಳಗೆ ನಾವು ಹೋದೆವು. ಮೊದಲು ನಾವು ಜೀಪನಲ್ಲಿ ಕುಳಿತಿದ್ದೆವು ಪೋಲೀಸರು ಕರೆದ ಮೇಲೆ ನಂತರ ಮನೆ ಒಳಗೆ ಹೋದೆವು. ಈ ಮನೆಯಲ್ಲಿ ರೂಮನಲ್ಲಿ ಬಟ್ಟೆ ಇಟ್ಟಿದ್ದರು. ಆ ರೂಮಿನ ಸೈಜ ನನಗೆ ಹೇಳಲಾಗುವುದಿಲ್ಲ. ಆ ರೂಮಿನ ಎಡಗಡೆ ಇತ್ತೋ ಬಲಗಡೆ ಇತ್ತೋ ಎಂದು ಬಹಳ ದಿವಸ ಆಗಿರುವುದರಿಂದ ಈಗ ಹೇಳಲು ಆಗುವುದಿಲ್ಲ. ರೂಮಿನ ಯಾಾ ಮೂಲೆಯಿಂದ ತೆಗೆದುಕೊಟ್ಟ ಎಂದು ನನಗೆ ಹೇಳಲಾಗುವುದಿಲ್ಲ. ಒಟ್ಟು ರೂಮಿನಿಂದ ತೆಗೆದುಕೊಟ್ಟ. ನಾನುಅಲ್ಲಿಗೆ ಹೋಗಿಲ್ಲ ಅದರಿಂದ ಈ ವಿಚಾರ ನನಗೆ ಹೇಳಲಾಗುವುದಿಲ್ಲ ಅಂದರೆ ಸರಿಯಲ್ಲ. ನಾನು ಮತ್ತು ದೂರುದಾರರು ಮೊದಲಿನಿಂದ

ಪರಿಚಯಸ್ಥರಾಗಿರುವುದರಿಂದ ಈ ಎಲ್ಲ ವಸ್ತುಗಳನ್ನು ಆರೋಪಿಗಳ ಕೈಗೆ ಕೊಟ್ಟು ನಂತರ ಕೇಸಗೆ ಅನುಕೂಲವಾಗಲಿ ಎಂದು ಸುಳುಳ ದಾಖಲೆಗಳನ್ನು ಸೃಷ್ಟಿಪಡಿಸಿಕೊಂಡಿದ್ದೇವೆ ಅಂದರೆ ಸರಿಯಲ್ಲ. ಯಾವುದೇ ಪಂಚನಾಮೆ ನಮ್ಮ ಮುಂದೆಆಗಿಲ್ಲ ಮತ್ತು ಯಾವುದೇ ಮುದ್ದೆಮಾಲುಗಳನ್ನು ಆಯಾ ಸ್ಥಳಗಲ್ಲಿ ಆರೋಪಿತರು ತೋರಿಸಿದ ಹಾಗೆ ನಮ್ಮ ಮುಂದೆ ವಶಪಡಿಸಿಕೊಂಡಿಲ್ಲ ಆದರೂ ಸಹ ನಾನು ಪಂಚನಾಮೆಗಳಿಗೆ ಆ ಸ್ಥಳಗಳಲ್ಲೇ ಸಹಿ ಮಾಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ರಾಕೇಶ ಹರಪನಹಳ್ಳಿ ಮತ್ತು ಮೃತ ನಾಗರಾಜ ನನಗೆ ಮೊದಲಿನಿಂದಲೂ ಪರಿಚಯ ಇದೆ ಅಂದರೆ ಸರಿಯಲ್ಲ. ಆ ಕಾರಣದಿಂದ ಕೇಸಗೆ ಅನುಕೂಲವಾಗಲಿ ಎಂದು ಚಾಸಾ–1 ರಾಕೇಶ ಹೇಳಿಕೊಟ್ಟ ಹಾಗೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಆರೋಪಿತರು ಪಂಚನಾಮೆ ಕಾಲಕ್ಕೆ ಕಣ್ಣಿಗೆ ಖಾರದಪುಡಿ ಹಾಕಿ ಬಡಿಗೆಯಿಂದ ಹೊಡೆದು ಮೃತನನ್ನು ಕೊಲೆ ಮಾಡಿದ್ದೇವೆ ಎಂದು ಹೇಳಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**( 1 ಮತ್ತು 2 ನೇ ಆರೋಪಿ ಪರ ವಕೀಲರುಗಳು ಇದೇ ಪಾಟಿ ಸವಾಲನ್ನು ಅಳವಡಿಸಿಕೊಂಡಿದ್ದಾರೆ)**

**ಮರುವಿಚಾರಣೆಃ ಇಲ್ಲ**

(ಈ ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಉಕ್ತ ಹೇಳಿಕೆಯ ಮೇರೆಗೆ ಗಣಕೀಕೃತ ಮಾಡಿಸಲಾಯಿತು).

ಓ. ಹೇ. ಕೇ. ಸರಿ ಇದೆ.

(ಬಿ. ಎಸ್. ಭಾರತಿ )
ಪ್ರಧಾನ ಜಿಲ್ಲಾ ಹಾಗೂ ಸತ್ರ ನ್ಯಾಯಾಧೀಶರು,
ಧಾರವಾಡ.